**ದಿನಾಂಕಃ 25.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನಾನು ಎಸ್. ಎಸ್. ಎಲ್.ಸಿ.ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆಂಗ್ಲ ಭಾಷೆ ಬರುವುದಿಲ್ಲ. ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ನಮ್ಮ ಕುಟುಂಬದಲ್ಲಿರುವವರೆಲ್ಲರೂ ಸೇರಿ ನೀಡಿರುತ್ತೇವೆ. ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡಿರುತ್ತೇನೆ. ನಮ್ಮ ತಂದೆಗೆ ಸರ್ವೇ ನಂ. 1/4 ರಲ್ಲಿ 2 ಎಕರೆ 10 ಗುಂಟೆ ಜಮೀನು ಬರಬೇಕೆಂದು ಕೋರಿ ದಾವೆಯನ್ನು ಹೂಡಿರುತ್ತೇವೆ. ಮುನಿಶ್ಯಾಮಪ್ಪ ಮತ್ತು ರಾಮಯ್ಯರವರು ನಮ್ಮ ತಂದೆಯ ಜೊತೆ ವಿಭಾಗ ಮಾಡಿಕೊಂಡಾಗ ನಮ್ಮ ತಂದೆಯವರಿಗೆ ಸದರಿ ಸ್ವತ್ತು ಬಂದಿರುತ್ತದೆ. ಸರ್ವೇ ನಂ. 17/1 ರಲ್ಲಿ 32 ಗುಂಟೆ, ಸರ್ವೇ ನಂ.15/2 ರಲ್ಲಿ 30 ಗುಂಟೆ, ಸರ್ವೇ ನಂ. 17/4 ಬಿ ನಲ್ಲಿ 6 ಗುಂಟೆ, ಸರ್ವೇ ನಂ. 17/4 ಎ ನಲ್ಲಿ 5 ಗುಂಟೆ ಸದರಿ ಆಸ್ತಿಗಳು ವಿಭಾಗದಲ್ಲಿ ನಮ್ಮ ತಂದೆಯ ಪಾಲಿಗೆ ಬಂದಿರುತ್ತವೆ. ಮುನಿಶ್ಯಾಮಪ್ಪರವರಿಗೆ ವಿಭಾಗದಲ್ಲಿ ಯಾವ ಆಸ್ತಿಗಳು ಬಂದಿರುತ್ತವೆ ಎಂದು ಹೇಳಲಾಗುವುದಿಲ್ಲ.

ವಿಭಾಗ ಪತ್ರವನ್ನು 1970 ರಲ್ಲಿ ಮಾಡಲಾಗಿರುತ್ತದೆ. ವಿಭಾಗ ಪತ್ರದಂತೆ ನಮ್ಮ ಪಾಲಿಗೆ ಬಂದ ಆಸ್ತಿಗಳಲ್ಲಿ ಕೆಲವೊಂದು ನಮ್ಮ ಹೆಸರಿನಲ್ಲಿ ಕಂದಾಯ ದಾಖಲೆಗಳು ಇರುತ್ತವೆ ಹಾಗೂ ಇನ್ನು ಕೆಲವೊಂದರಲ್ಲಿ ಕಂದಾಯ ದಾಖಲೆಗಳು ಜಂಟಿಯಾಗಿರುತ್ತವೆ. ವಿಭಾಗಪತ್ರದಲ್ಲಿ ತೋರಿಸಿದ ರೀತಿಯಲ್ಲಿ ಇರುವ ಚೆಕ್ಕುಬಂಧಿಯಲ್ಲಿ ನಾವುಗಳು ಹಾಗೂ ಮುನಿಶ್ಯಾಮಪ್ಪರವರು ಸ್ವಾಧೀನದಲ್ಲಿರುತ್ತೇವೆ. ಕಂದಾಯ ಇಲಾಖೆಯವರು ನಮ್ಮ ಪಾಲಿಗೆ ಬಂದ ಕೆಲವೊಂದು ಆಸ್ತಿಗಳಲ್ಲಿ ಹದ್ದುಬಸ್ತು ಮಾಡಿ ಕಂದಾಯ ದಾಖಲೆಗಳನ್ನು ಬದಲಾಯಿಸಿರುತ್ತಾರೆ ಆದರೆ ಜಂಟಿಯಲ್ಲಿ ಇದ್ದ ಆಸ್ತಿಗಳು ಇನ್ನೂ ಹದ್ದುಬಸ್ತು ಮಾಡಿರುವುದಿಲ್ಲ.

ಸರ್ವೇ ನಂ. 1/4 ರ ಒಟ್ಟು ವಿಸ್ತೀರ್ಣ 2 ಎಕರೆ 28 ಗುಂಟೆ ಇರುತ್ತದೆ. ಉಳಿಕೆ ಜಮೀನಿನಲ್ಲಿ ಮುನಿಶ್ಯಾಮಪ್ಪರವರ ವಾರಸುದಾರರು ಸ್ವಾಧೀನದಲ್ಲಿರುತ್ತಾರೆ. ಓ.ಎಸ್. 141/2013 ದಾವೆಯಲ್ಲಿ ಮುನಿಶ್ಯಾಮಪ್ಪರವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ ದಾವೆಯಲ್ಲಿ ಮಾಡಿಕೊಂಡಂತಹ ರಾಜಿಯ ವಿಷಯವನ್ನು ಅವರ ಗಮನಕ್ಕೆ ತಂದಿರುವುದಿಲ್ಲ. ವಿಭಾಗ ಪತ್ರದಲ್ಲಿ

ನಮ್ಮ ಪಾಲಿಗೆ ಬಂದಂತಹ ಆಸ್ತಿಗಳನ್ನು ವಿಭಾಗ ಪತ್ರ ನೋಡಿಕೊಂಡೆ ಹೇಳಬಲ್ಲೆ. ಕೆಲವೊಂದು ಮಾತ್ರ ನೆನಪಿರುತ್ತದೆ ಎಂದು ನುಡಿಯುತ್ತಾರೆ. ವಿಭಾಗ ಪತ್ರ ಪ್ರಕಾರ ಸರ್ವೇ ನಂ. 1/4 ರಲ್ಲಿ 2 ಎಕರೆ 10 ಗುಂಟೆ ಪೈಕಿ ಚಂದ್ರಮ್ಮರವರಿಗೆ 6 ಗುಂಟೆ ಆಸ್ತಿಯನ್ನು ನೀಡಲಾಗಿರುತ್ತದೆ ಎಂದರೆ ಸರಿ. ದಾವಾಸ್ವತ್ತುಗಳ ವಿವರಗಳನ್ನು ಹೇಳಲಾಗುವುದಿಲ್ಲ. ದಾವಾಸ್ವತ್ತುಗಳ ಚೆಕ್ಕುಬಂಧಿಯನ್ನು ವಾದ ಪತ್ರ ನೋಡಿ ಮಾತ್ರ ಹೇಳಬಲ್ಲೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಯಾವ ದಾವಾಸ್ವತ್ತಿಗೆ ಯಾವಾಗ ತೊಂದರೆಯನ್ನು ನೀಡಿದ್ದರು ಎಂದರೆ ಸಾಕ್ಷಿಯು ಯಾರು ತೊಂದರೆ ಕೊಟ್ಟಿರುವುದಿಲ್ಲ ನಾವು ಕುಟುಂಬದವರೇ ಸೇರಿಕೊಂಡು ರಾಜೀ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

ನಾವು 1970 ರಲ್ಲಿ ವಿಭಾಗ ಮಾಡಿಕೊಂಡ ಕಾಲಕ್ಕೆ ಸೊನ್ನಪ್ಪನಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂ. 4/4 ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಸ್ವತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 4/4 ರ ವಿಸ್ತೀರ್ಣ 32 ಗುಂಟೆ ಎಂದರೆ ಸರಿ. 1975 ರಲ್ಲಿ ಮುನಿಶ್ಯಾಮಪ್ಪರವರು ಸರ್ವೇ ನಂ. 4/4 ರ 32 ಗುಂಟೆಯನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ಮುನಿಶ್ಯಾಮಪ್ಪರವರಿಗೆ ಸರ್ವೇ ನಂ.1/4 ರಲ್ಲಿ 32 ಗುಂಟೆಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ. 1/4 ನ್ನು ಕೈತಪ್ಪಿನಿಂದ ಸರ್ವೇ ನಂ. 4/4 ಎಂದು ನಮೂದು ಆಗಿರುತ್ತದೆ ಆದರೆ ಚೆಕ್ಕುಬಂಧಿ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಮುನಿಶ್ಯಾಮಪ್ಪರವರ ಮಕ್ಕಳು ಆರ್.ಎ. 313/2017 ರಲ್ಲಿ ದೊಡ್ಡಬಳ್ಳಾಪುರ ತಹಶೀಲ್ದಾರ್ ಕಛೇರಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯನ್ನು ಪುರಸ್ಕರಿಸಿ ಸರ್ವೇ ನಂ.1/4 ಹಾಗೂ 4/4 ರಲ್ಲಿ ಸ್ವಾಧೀನದಲ್ಲಿರುವವರ ಬಗ್ಗೆ ಪರಿಶೀಲನೆ ಮಾಡಿ ಅರ್ಜಿದಾರರ ಸ್ವಾಧೀನವನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದಂತೆ ಕಂದಾಯ ಇಲಾಖೆಯವರು ಸರ್ವೇ ನಂ. 1/4 ರ ಸ್ಥಳ ಪರಿಶೀಲನೆ ಮಾಡಿ, ಅದರಲ್ಲಿ ಭದ್ರಪ್ಪ, ಕೃಷ್ಣಪ್ಪ ಪಾವತಿ ಇರುವ ಕಾರಣ ಅವರ ಹೆಂಡತಿ ಜಯಮ್ಮ, ಮುನೇಗೌಡ ಹಾಗೂ ಕೆಂಪಯ್ಯರವರು ಅನುಭವದಲ್ಲಿರುವ ಬಗ್ಗೆ ವರದಿ ನೀಡಿರುತ್ತಾರೆ ಎಂದರೆ ಸ್ಥಳ ಪರಿಶೀಲನೆಯೇ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದಂತೆ ಕಂದಾಯ ಇಲಾಖೆಯವರು ಸರ್ವೇ ನಂ. 4/4 ರ ಸ್ಥಳ ಪರಿಶೀಲನೆ ಮಾಡಿ, ಅದರಲ್ಲಿ ಹನುಮಂತ ಗೌಡ ಬಿನ್ ಲೇಟ್ ಕೃಷ್ಣಪ್ಪರವರು ಅನುಭವದಲ್ಲಿರುವ

ಬಗ್ಗೆ ವರದಿ ನೀಡಿರುತ್ತಾರೆ ಎಂದರೆ ಸ್ಥಳ ಪರಿಶೀಲನೆಯೇ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸ್ಥಳ ಪರಿಶೀಲನೆ ಮಾಡುವ ವೇಳೆ ನಾನು ಹಾಜರಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆಯವರಿಗೆ ಭಾಗಾಂಶದಲ್ಲಿ ಬಂದಿರುವ 2 ಎಕರೆ 10 ಗುಂಟೆಯನ್ನು ಹೊರತುಪಡಿಸಿ ಇನ್ನೂ ಹೆಚ್ಚಿನ ಆಸ್ತಿಯನ್ನು ಸೇರಿಸಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸಾಕ್ಷಿಯು ನಮ್ಮ ತಂದೆಯ ಪಾಲಿನ 2 ಎಕರೆ 10 ಗುಂಟೆ ನಮಗೆ ನೀಡಬೇಕೆಂದು ಕೋರಿಕೊಳ್ಳುತ್ತೇನೆ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ.**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**